INDIAN STREAMS RESEARCH JOURNAL
ISSN NO : 2230-7850
IMPACT FACTOR : 5.1651 (UIF)
VOLUME - 15 | ISSUE - 11 | DECEMBER – 2025

ಕ್ರಾಂತಿಯಲ್ಲಿ ಅರಳಿದ ಮೈಸೂರು ಮಲ್ಲಿಗೆ

ಡಾ. ಶಿವಕುಮಾರ ಪಿ. ಆರ್
ಸಹ ಪ್ರಾಧ್ಯಾಪಕರು
ಶ್ರೀ ಹೆಚ್ .ಡಿ ದೇವೇಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಪಡುವಲಹಿಪ್ಪೆ
ಹೊಳೆನರಸೀಪುರ ತಾ
ಹಾಸನ ಜಿಲ್ಲೆ



ಎಲ್ಲಾ ಭಾಷೆಯ ಸಾಹಿತ್ಯಕ್ಕೂ ಆ ಭಾಷೆಯ ಚಲನಚಿತ್ರಗಳಿಗೂ ಒಂದು ಅವಿನಾಭಾವ ಸಂಬಂಧ ಇರುವುದನ್ನು ನೊಡಬಹುದು. ಹಾಗೆಯೇ ಕನ್ನಡ ಭಾಷೆ ಮತ್ತು ಚಲನಚಿತ್ರಗಳು ತಮ್ಮೊಳಗೆ ಕೊಡು-ಕೊಳ್ಳುವಿಕೆಯನ್ನು ಇಟ್ಟುಕೊಂಡಿವೆ. ಆ ನಿಟ್ಟಿನಲ್ಲಿ ಕನ್ನಡ ಚಲನಚಿತ್ರದಲ್ಲಿ ಕೆ.ಎಸ್ ನರಸಿಂಹ ಸ್ವಾಮಿ ಅವರ ಮೈಸೂರು ಮಲ್ಲಿಗೆ ಕವನ ಸಂಕಲನವು ಟಿ. ಎಸ್ ನಾಗಾಭರಣ ಅವರು ಮೈಸೂರು ಮಲ್ಲಿಗೆ ಎಂಬ ಹೆಸರಲ್ಲಿ ಚಲನಚಿತ್ರವಾಗಿಸಿದ್ದಾರೆ.
ಅದರ ಒಟ್ಟಂದವನ್ನು ಈ ಲೇಖನದಲ್ಲಿ ಕಟ್ಟಿಕೊಡಲಾಗಿದೆ.

ಕ್ರಾಂತಿಯಲ್ಲಿ ಅರಳಿದ ಮೈಸೂರು ಮಲ್ಲಿಗೆ

ಸಾಹಿತ್ಯ ಮತ್ತು ಚಲನಚಿತ್ರ ಎರಡು ಭಿನ್ನ ಮಾಧ್ಯಮಗಳು. ಇವುಗಳ ನಡುವಿನ ಕೊಡು–ಕೊಳ್ಳುವಿಕೆಯ ಗುಣವು ಸಾಮಾನ್ಯವಾಗಿದೆ. ಹೀಗಾಗಿ ಜಗತ್ತಿನ ಎಲ್ಲಾ ಭಾಷೆಗಳಲ್ಲೂ ಸಾಹಿತ್ಯ ಮತ್ತು ಚಲನಚಿತ್ರಗಳ ನಡುವೆ ಸಂಬಂಧವಿರುವುದು ಸ್ಪಷ್ಟವಾಗಿದೆ. ಕನ್ನಡವೂ ಸಹ ಈ ಮಾತಿಗೆ ಹೊರತಾಗಿಲ್ಲ. ಆರಂಭ ಕಾಲದಿಂದಲೂ ಕನ್ನಡ ಚಲನಚಿತ್ರ ಕನ್ನಡ ಸಾಹಿತ್ಯದೊಂದಿಗೆ ಸಂಬಂಧ ಹೊಂದಿರುವುದನ್ನು ಕಾಣಬಹುದಾಗಿದೆ. ಕನ್ನಡ ಸಾಹಿತ್ಯ ವಿವಿಧ ಪ್ರಕಾರಗಳು ಚಲನಚಿತ್ರ ರೂಪವನ್ನು ಪಡೆದುಕೊಂಡಿವೆ. ಕತೆ, ನಾಟಕ, ಕಾದಂಬರಿ, ಜೀವನ ಚರಿತ್ರೆ, ಆತ್ಮ ಕತೆ, ಗೀತ ಸಾಹಿತ್ಯ ಹೀಗೆ ಸಾಹಿತ್ಯ ಪ್ರಕಾರಗಳು ಚಲನಚಿತ್ರಗಳಾಗಿವೆ.

ಕನ್ನಡ ಸಾಹಿತ್ಯ ಮತ್ತು ಕನ್ನಡ ಚಲನಚಿತ್ರಗಳ ಒಂದು ಭಿನ್ನ ಪ್ರಯೋಗವೆಂದರೆ 'ಮೈಸೂರು ಮಲ್ಲಿಗೆ' ಚಲನಚಿತ್ರ. ಮೈಸೂರು ಮಲ್ಲಿಗೆ ಚಿತ್ರವು ಪ್ರೇರಣೆ ಪಡೆದದ್ದು ಅಕ್ಷರದ ನೆಲೆಯಿಂದಲೇ. ಕೆ.ಎಸ್ ನರಸಿಂಹ ಸ್ವಾಮಿ ಅವರ ಮೈಸೂರು ಮಲ್ಲಿಗೆ ಕವನ ಸಂಕಲನದ ಆಧಾರದಿಂದ ಒಂದು ಸುಂದರ ದೃಶ್ಯಕಾವ್ಯ ಮೂಡಿಬಂದಿದೆ. ಕೆ.ಎಸ್.ನ ಅವರ ಮೈಸೂರು ಮಲ್ಲಿಗೆ ಕನ್ನಡ ಸಾಹಿತ್ಯದಲ್ಲಿ ಅಗ್ರಸ್ಥಾನದಲ್ಲಿ ನಿಲ್ಲುವಂತಹದ್ದು.

ಮೈಸೂರು ಮಲ್ಲಿಗೆ ಕವನಸಂಕಲನವು ಕೆ.ಎಸ್.ನ ಅವರ ಮೊದಲ ಕವನಸಂಕಲನವಾಗಿದೆ. ಅವರು ಮದುವೆಯಾದದ್ದು ೧೯೩೬ರಲ್ಲಿ ಆನಂತರದ ೬ ವರ್ಷಗಳಲ್ಲಿ ಅರಳಿದ ಕವನಗಳನ್ನು ೧೯೪೨ರ ಜನವರಿಯಲ್ಲಿ 'ಮೈಸೂರು ಮಲ್ಲಿಗೆ' ಕವನಸಂಕಲನದ ಹೆಸರಲ್ಲಿ ಬಿಡುಗಡೆ ಮಾಡಿದರು. ನಾಲ್ಕು ಅನುವಾದಿತ ಕವನಗಳು ಸೇರಿ ೪೯ ಕವಿತೆಗಳಿರುವ ಈ ಸಂಕಲನ ಕನ್ನಡ ಮನಸ್ಸುಗಳ ಸಾಂಸ್ಕೃತಿಕ ದಾಖಲೆಯಾಗಿದೆ. ಸುಮಾರು ಎಂಟು ದಶಕಗಳು ಕಳೆದರೂ ಮೈಸೂರು ಮಲ್ಲಿಗೆಯ ಸೊಬಗು ಹಾಗೇ ಉಳಿದಿದೆ. ಅದು ಇನ್ನೂ ಬಾಡಿಲ್ಲ. ಮುಂದೆ ಬಾಡುವಂತೆಯೂ ಇಲ್ಲ. ನಾಡಿನಾದ್ಯಂತ ಅದರ ಗಮ ಪಸರಿಸಿದೆ. ಡಾ. ಸಿ.ಎನ್.ಆರ್ ಅವರು ಕೆ.ಎಸ್.ನ ಅವರ ಕವಿತೆಗಳನ್ನು ಕುರಿತು 'ಆರೇಳು ದಶಕಗಳ ಅವಧಿಯಲ್ಲಿ ಕೆ.ಎಸ್.ನ ಸುಮಾರು ೫೦೦ ಕ್ಕೂ ಹೆಚ್ಚು ಕವಿತೆಗಳನ್ನು ಬರೆದಿದ್ದಾರೆ. ವಸ್ತುವಿನ ನೆಲೆಯಲ್ಲಿ ಅವರ ಒಟ್ಟು ಕಾವ್ಯದ ಹರವು ವಿಸ್ಮಯವಾಗುವಷ್ಟು ವಿಶಾಲವಾಗಿದೆ. ಪ್ರೇಮ, ಕುಟುಂಬ, ದಾಂಪತ್ಯ, ಆಧ್ಯಾತ್ಮ, ಸಾಮಾಜಿಕ ನೆಲೆಯ ಜೊತೆಗೆ ರಾಷ್ಟ್ರ–ರಾಷ್ಟ್ರಪ್ರೇಮ, ಕನ್ನಡ ಭಾಷೆ ಮತ್ತು ಕನ್ನಡಾಭಿಮಾನದ ಕವನಗಳು ಸಹ ಇವೆ' ಎಂದಿದ್ದಾರೆ.

ಕೆ.ಎಸ್.ನ ಅವರ ಒಟ್ಟು ಸಾಹಿತ್ಯಕ್ಕೆ ನ್ಯಾಯ ಒದಗಿಸುವಂತೆ 'ಮೈಸೂರು ಮಲ್ಲಿಗೆ' ಚಿತ್ರವು ಮೂಡಿಬಂದಿದೆ. ಟಿ.ಎಸ್ ನಾಗಭರಣ ಅವರ ನಿರ್ದೇಶನದಲ್ಲಿ ತೆರೆಕಂಡ ಈ ಚಿತ್ರವು ಕನ್ನಡಿಗರ ಮನದಲ್ಲಿ ಚಿರವಾಗಿ ಉಳಿದಿದೆ. ಸಾಮಾನ್ಯವಾಗಿ ಮೈಸೂರು ಮಲ್ಲಿಗೆಯಂತಹ ಒಂದು ಕೃತಿಯು ಒಂದು ಚಲನಚಿತ್ರವಾಗಿ ತೆರೆಯ ಮೇಲೆ ಬರುವ ಸಂದರ್ಭದಲ್ಲಿ ಒಂದು ಸಾಕ್ಷ್ಯಚಿತ್ರವಾಗಿಯೋ, ಒಂದು ಕಿರುಚಿತ್ರವಾಗಿಯೋ ಅಥವಾ ಕವಿತೆಗಳ ಜನಪ್ರಿಯತೆಯನ್ನು ಮೆಚ್ಚಿಕೊಂಡು ಆ ಕವಿತೆಗಳ ಒಂದು ದೃಶ್ಯ ರೂಪವಾಗಿ ಕಾಣಿಸಿಕೊಳ್ಳುತ್ತದೆ. ಆದರೆ ಈ ಎಲ್ಲಾ ಮಾದರಿಗಳನ್ನು ಬಿಟ್ಟು ಒಂದು ಸ್ವತಂತ್ರ ಕತೆಯೊಂದಿಗೆ ಗೀತೆಗಳ ದೃಶ್ಯರೂಪವನ್ನು ಮೈಗೂಡಿಸಿಕೊಂಡು ಚಲನಚಿತ್ರ ರೂಪವನ್ನು ಪಡೆದದ್ದು ಬೆರಗು ಮೂಡಿಸುವಂತಹದ್ದು.

ಮಿಲನ್ ಕುಂದೇರ ಅವರು 'ಸಾಹಿತ್ಯ ಕೃತಿಯೊಂದು ತನಗೆ ತಾನೇ ಸಂಪೂರ್ಣವಾಗಿದ್ದರೆ ಅಂಥ ಕೃತಿಯನ್ನು ಸಿನಿಮಾ ಮಾಧ್ಯಮಕ್ಕೆ ಅಳವಡಿಸುವುದು ಅಗತ್ಯವಿಲ್ಲ. ಮಹಾನ್ ನಿರ್ದೇಶಕನೊಬ್ಬ ಆ ಕೃತಿ ಹೊಂದಿರುವ ಆಶಯಗಳಾಚೆಗೂ ನೋಡುವ ಸಾಧ್ಯತೆಗಳಿವೆ ಎಂದು ಕಂಡುಕೊಂಡರೆ ಮಾತ್ರ ಅಂಥದ್ದನ್ನು ಸಿನಿಮಾಕ್ಕೆ ಆಳವಡಿಸುತ್ತಾನೆ'ಎಂದಿದ್ದಾರೆ. ಇವರ ಮಾತುಗಳನ್ನು ಮೈಸೂರು ಮಲ್ಲಿಗೆ ಚಿತ್ರ ನಿರ್ದೇಶಕರು ಸಾಕಾರಗೊಳಿಸಿದ್ದಾರೆ. ೨೦ ನೇ ಶತಮಾನದ ೩೦ ಮತ್ತು ೪೦ ನೇ ದಶಕ ಭಾರತದಲ್ಲಿ ಸ್ವಾತಂತ್ರ್ಯ ಚಳವಳಿಯ ಹೋರಾಟವು ತೀವ್ರವಾಗಿದ್ದಂತಹ ಕಾಲ. ಅದರಲ್ಲೂ ೧೯೪೨ ಭಾರತ ಬಿಟ್ಟು ತೊಲಗಿಯಂತಹ ಚಳವಳಿಗಳು ನಡೆಯುತಿದ್ದವು. ಅಂತಹ ಕಾಲದಲ್ಲಿ ಪ್ರೇಮ ಕವಿತೆಗಳನ್ನು ಒಳಗೊಂಡ ಮೈಸೂರು ಮಲ್ಲಿಗೆಯಂತಹ ಕವನಸಂಕನಲನವು ಬಿಡುಗಡೆಯಾಗುತ್ತದೆ. ಆ ಕೃತಿಯನ್ನು ಆಧರಿಸಿ ೧೯೪೨ರ ಜನವರಿಯಲ್ಲಿ 'ಮೈಸೂರು ಮಲ್ಲಿಗೆ' ಕವನಸಂಕಲನದ ಹೆಸರಲ್ಲಿ ಬಿಡುಗಡೆ ಮಾಡಿದರು. ನಾಲ್ಕು ಅನುವಾದಿತ ಕವನಗಳು ಸೇರಿ ೪೯ ಕವಿತೆಗಳಿರುವ ಈ ಸಂಕಲನ ಕನ್ನಡ ಮನಸ್ಸುಗಳ

ಸಾಂಸ್ಕೃತಿಕ ದಾಖಲೆಯಾಗಿದೆ. ಸುಮಾರು ಎಂಟು ದಶಕಗಳು ಕಳೆದರೂ ಮೈಸೂರು ಮಲ್ಲಿಗೆಯ ಸೊಬಗು ಹಾಗೇ ಉಳಿದಿದೆ. ಅದು ಇನ್ನೂ ಬಾಡಿಲ್ಲ. ಮುಂದೆ ಬಾಡುವಂತೆಯೂ ಇಲ್ಲ. ನಾಡಿನಾದ್ಯಂತ ಅದರ ಗಮ ಪಸರಿಸಿದೆ. ಡಾ. ಸಿ.ಎನ್.ಆರ್ ಅವರು ಕೆ.ಎಸ್.ನ ಅವರ ಕವಿತೆಗಳನ್ನು ಕುರಿತು 'ಆರೇಳು ದಶಕಗಳ ಅವಧಿಯಲ್ಲಿ ಕೆ.ಎಸ್.ನ ಸುಮಾರು ೫೦೦ ಕ್ಕೂ ಹೆಚ್ಚು ಕವಿತೆಗಳನ್ನು ಬರೆದಿದ್ದಾರೆ. ವಸ್ತುವಿನ ನೆಲೆಯಲ್ಲಿ ಅವರ ಒಟ್ಟು ಕಾವ್ಯದ ಹರವು ವಿಸ್ಮಯವಾಗುವಷ್ಟು ವಿಶಾಲವಾಗಿದೆ. ಪ್ರೇಮ, ಕುಟುಂಬ, ದಾಂಪತ್ಯ, ಆಧ್ಯಾತ್ಮ, ಸಾಮಾಜಿಕನೆಲೆಯ ಜೊತೆಗೆ ರಾಷ್ಟ್ರ–ರಾಷ್ಟ್ರಪ್ರೇಮ, ಕನ್ನಡ ಭಾಷೆ ಮತ್ತು ಕನ್ನಡಾಭಿಮಾನದ ಕವನಗಳು ಸಹ ಇವೆ' ಎಂದಿದ್ದಾರೆ.

ಕೆ.ಎಸ್.ನ ಅವರ ಒಟ್ಟು ಸಾಹಿತ್ಯಕ್ಕೆ ನ್ಯಾಯ ಒದಗಿಸುವಂತೆ 'ಮೈಸೂರು ಮಲ್ಲಿಗೆ' ಚಿತ್ರವು ಮೂಡಿಬಂದಿದೆ. ಟಿ.ಎಸ್ ನಾಗಭರಣ ಅವರ ನಿರ್ದೇಶನದಲ್ಲಿ ತೆರೆಕಂಡ ಈ ಚಿತ್ರವು ಕನ್ನಡಿಗರ ಮನದಲ್ಲಿ ಚಿರವಾಗಿ ಉಳಿದಿದೆ. ಸಾಮಾನ್ಯವಾಗಿ ಮೈಸೂರು ಮಲ್ಲಿಗೆಯಂತಹ ಒಂದು ಕೃತಿಯು ಒಂದು ಚಲನಚಿತ್ರವಾಗಿ ತೆರೆಯ ಮೇಲೆ ಬರುವ ಸಂದರ್ಭದಲ್ಲಿ ಒಂದು ಸಾಕ್ಷ್ಯಚಿತ್ರವಾಗಿಯೋ, ಒಂದು ಕಿರುಚಿತ್ರವಾಗಿಯೋ ಅಥವಾ ಕವಿತೆಗಳ ಜನಪ್ರಿಯತೆಯನ್ನು ಮೆಚ್ಚಿಕೊಂಡು ಆ ಕವಿತೆಗಳ ಒಂದು ದೃಶ್ಯ ರೂಪವಾಗಿ ಕಾಣಿಸಿಕೊಳ್ಳುತ್ತದೆ. ಆದರೆ ಈ ಎಲ್ಲಾ ಮಾದರಿಗಳನ್ನು ಬಿಟ್ಟು ಒಂದು ಸ್ವತಂತ್ರ ಕತೆಯೊಂದಿಗೆ ಗೀತೆಗಳ ದೃಶ್ಯರೂಪವನ್ನು ಮೈಗೂಡಿಸಿಕೊಂಡು ಚಲನಚಿತ್ರರೂಪವನ್ನು ಪಡೆದದ್ದು ಬೆರಗುಮೂಡಿಸುವಂತಹದ್ದು.

ಮಿಲನ್ ಕುಂದೇರ ಅವರು 'ಸಾಹಿತ್ಯ ಕೃತಿಯೊಂದು ತನಗೆ ತಾನೇ ಸಂಪೂರ್ಣವಾಗಿದ್ದರೆ ಅಂಥ ಕೃತಿಯನ್ನು ಸಿನಿಮಾ ಮಾಧ್ಯಮಕ್ಕೆ ಅಳವಡಿಸುವುದು ಅಗತ್ಯವಿಲ್ಲ. ಮಹಾನ್ ನಿರ್ದೇಶಕನೊಬ್ಬ ಆ ಕೃತಿ ಹೊಂದಿರುವ ಆಶಯಗಳಾಚೆಗೂ ನೋಡುವ ಸಾಧ್ಯತೆಗಳಿವೆ ಎಂದು ಕಂಡುಕೊಂಡರೆ ಮಾತ್ರ ಅಂಥದ್ದನ್ನು ಸಿನಿಮಾಕ್ಕೆ ಆಳವಡಿಸುತ್ತಾನೆ'ಎಂದಿದ್ದಾರೆ. ಇವರ ಮಾತುಗಳನ್ನು ಮೈಸೂರು ಮಲ್ಲಿಗೆ ಚಿತ್ರ ನಿರ್ದೇಶಕರು ಸಾಕಾರಗೊಳಿಸಿದ್ದಾರೆ. ೨೦ ನೇ ಶತಮಾನದ ೩೦ ಮತ್ತು ೪೦ ನೇ ದಶಕ ಭಾರತದಲ್ಲಿ ಸ್ವಾತಂತ್ರ್ಯ ಚಳವಳಿಯ ಹೋರಾಟವು ತೀವ್ರವಾಗಿದ್ದಂತಹ ಕಾಲ. ಅದರಲ್ಲೂ ೧೯೪೨ ಭಾರತ ಬಿಟ್ಟು ತೊಲಗಿಯಂತಹ ಚಳವಳಿಗಳು ನಡೆಯುತಿದ್ದವು. ಅಂತಹ ಕಾಲದಲ್ಲಿ ಪ್ರೇಮ ಕವಿತೆಗಳನ್ನು ಒಳಗೊಂಡ ಮೈಸೂರು ಮಲ್ಲಿಗೆಯಂತಹ ಕವನಸಂಕನಲನವು ಬಿಡುಗಡೆಯಾಗುತ್ತದೆ. ಆ ಕೃತಿಯನ್ನು ಆಧರಿಸಿ ೧೯೯೨ರಲ್ಲಿ ಅಂದರೆ ಸರಿಯಾಗಿ ಸುಮಾರು ೫೦ ವರ್ಷಗಳು ಕಳೆದ ನಂತರ ಚಲನಚಿತ್ರವು ತೆರೆಗೆ ಬರುತ್ತದೆ. ಮೈಸೂರು ಮಲ್ಲಿಗೆಯ ಚಿತ್ರದ ನಿರ್ದೇಶಕರಾದ ಟಿ.ಎಸ್ ನಾಗಭರಣ ಅವರು ಆ ಕೃತಿಯ ಆಶಯದಾಚೆಗೆ ಸ್ವತಂತ್ರ ಕಥಾನಕವನ್ನು ರೂಪಿಸಿಕೊಂಡು ಚಿತ್ರಕತೆಯನ್ನು ಎಣೆದಿದ್ದಾರೆ.

ಮೈಸೂರು ಮಲ್ಲಿಗೆಯ ಕವನಗಳು ಕಟ್ಟಿಕೊಟ್ಟಿರುವ ಕತೆಯ ಹರವು ತುಂಬಾ ಚಿಕ್ಕದು. ಅಕ್ಕಪಕ್ಕದ ಹಳ್ಳಿಗಳಾದ ನವಿಲೂರು, ಹೊನ್ನೂರು. ನವಿಲೂರಿನ ಶ್ಯಾನಭೋಗರು, ಅವರ ಮಗಳು ಪದ್ಮ, ಅವಳ ತಂಗಿ ತುಂಗಾ, ತಾಯಿಯಿಲ್ಲದ ಮಕ್ಕಳು. ಪದ್ಮಳನ್ನು ಮದುವೆಯಾಗುವ ಹೊನ್ನೂರಿನ ಯುವಕ, ಬಳೆಗಾರ ಚೆನ್ನಯ್ಯನ ಪಾತ್ರ ಹೀಗೆ ಕೆಲವೇ ವಿವರಗಳು ಪುನರಾವರ್ತಿತವಾಗುತ್ತವೆ. ಎಲ್ಲೂ ಕ್ರಿಯಾಶೀಲ ಕತೆ ಎನ್ನುವುದೇ ಇಲ್ಲ. ಹೀಗಾಗಿ ಇದನ್ನು ಚಲನಚಿತ್ರವಾಗಿಸುವುದು ಕತೆಯೇ ಇಲ್ಲದ ಅನುಭವಕ್ಕೆ ಜೀವಕೊಡುವಂತಹದ್ದಾಗಿತ್ತು. ನಿರ್ದೇಶಕ ನಾಗಭರಣ ಅವರು ಈ ಕಥಾನಕವನ್ನು ಸ್ವಾತಂತ್ರ್ಯ ಪೂರ್ವಕ್ಕೆ ಹೊಂದಿಸಿಕೊಂಡು ಕತೆಯನ್ನು ನಿರೂಪಿಸಿದರು. ಕವಿತೆಗಳು ಹುಟ್ಟಿದ್ದು ಅದೇ ಕಾಲವಾದ್ದರಿಂದ ಅದರ ಒಳ ಸೂಚನೆಗಳನ್ನು ಬಳಸಿಕೊಂಡರು. ಸ್ವಾತಂತ್ರ್ಯ ಚಳವಳಿಯಲ್ಲಿ ಶ್ಯಾನಭೋಗರು ಬ್ರಿಟಿಷರ ಪರವಾಗಿಯೂ

ಮತ್ತು ಶಾಲಾ ಶಿಕ್ಷಕರು, ಗ್ರಾಮಸ್ಥರು ಚಳವಳಿಯ ಪರವಾಗಿಯೂ ಇದ್ದರು ಎನ್ನುವುದು ಚಾರಿತ್ರಿಕ ಸತ್ಯವಾದ್ದರಿಂದ ಕವಿತೆಗಳಿಗೆ ಗಟ್ಟಿತನ ದೊರಕಿತು. ಕವಿತೆಗಳ ರೂಪಕಕ್ಕೆ ತಕ್ಕಂತೆ ಒಂದು ನವಿರಾದ ಪ್ರೇಮ ಕತೆಯನ್ನು ಸೃಷ್ಟಿಸಿ ಅದನ್ನು ಸ್ವಾತಂತ್ರ್ಯ ಚಳವಳಿಯ ಜೊತೆ ಜೊತೆಗೆ ತೆಗೆದುಕೊಂಡು ಹೋಗಿದ್ದಾರೆ. ಶ್ಯಾನಭೋಗರ ಮಗಳು ಪದ್ಮ ಮತ್ತು ಆ ಊರಿಗೆ ಶಾಲಾ ಶಿಕ್ಷಕರಾಗಿ ಬರುವ ಮಂಜುನಾಥ ಇವರ ಪ್ರೇಮ, ವಿವಾಹ ಅದಕ್ಕೆ ತಕ್ಕಂತೆ ಗೀತೆಗಳನ್ನು ಬಳಸಿಕೊಂಡು ದೃಶ್ಯ ರೂಪಕವನ್ನು ಯಶಸ್ವಿಯಾಗಿ ಕಟ್ಟಿದ್ದಾರೆ. 'ಹಕ್ಕಿಯ ಹಾಡಿಗೆ ತಲೆದೂಗುವ ಹೂ ನಾನಾಗುವ ಆಸೆ' ಗೀತೆ, ನಿನ್ನ ಪ್ರೇಮದ ಪರಿಯ ನಾನರಿಯೇ ಕನಕಾಂಗಿ, ಒಂದಿರುಳು ಕನಸಿನಲಿ ನನ್ನವಳ ಕೇಳಿದೆನು, ಸಿರಿಗೆರೆಯ ನೀರಿನಲ್ಲಿ ಬಿರಿದ ತಾವರೆಯಲ್ಲಿ ಯಂತಹ ಗೀತೆಗಳನ್ನು ಒಂದು ನವಿರಾದ ಪ್ರೇಮಕತೆಗೆ ಹೊಂದಿಕೆ ಆಗುವಂತೆ ಬಳಸಿಕೊಂಡಿದ್ದಾರೆ.

ಕೆ.ಎಸ್.ನ ಅವರ ಕವಿತೆಗಳಲ್ಲಿ ಬಹಳ ಚಿಕ್ಕ ವಿವರವಾಗಿ ಬರುವ ಬಳೆಗಾರ ಚೆನ್ನಯ್ಯ ಚಿತ್ರದಲ್ಲಿ ಪ್ರಧಾನ ಪಾತ್ರವಾಗಿ ಬೆಳೆದಿದ್ದಾನೆ. ಅವನು ಪದ್ಮ ಮತ್ತು ನಾಯಕ ಮಂಜುನಾಥರ ನಡುವಿನ ಪ್ರೇಮದ ಸೂತ್ರಧಾರನಾಗಿದ್ದಾನೆ. ಹಾಗೆಯೇ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿರುತ್ತಾನೆ. ಕೊನೆಗೆ ಪೊಲೀಸ್ ಗುಂಡಿನಿಂದ ದುರಂತ ಸಾವಿಗೆ ಗುರಿಯಾಗುತ್ತಾನೆ. ಇದರಿಂದಾಗಿ ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹೆನು ಗೀತೆ ಹೊಸ ಅರ್ಥ ಪರಂಪರೆಯನ್ನ ಪಡೆದುಕೊಂಡಿದೆ. ಕತೆಯ ತಿರುವುಗಳಿಗೆ ಗೀತೆಗಳನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ. 'ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹೆನು' ಗೀತೆಯ ಮುನಿಸು ಮಾವನ ಮೇಲೆ ಮಗಳೇನ ಮಾಡಿಹಳು ಮುಂತಾದ ಸಾಲುಗಳು ಕತೆಗೆ ಪೂರಕವಾಗಿ ಬಂದಿವೆ. 'ರಾಯರು ಬಂದರು ಮಾವನಮನೆಗೆ"ಒಂದಿರುಳು ಕನಸಿನಲಿನಂತಹ ಜನಪ್ರಿಯ ಗೀತೆಗಳು ಚಿತ್ರಶಿಲ್ಪದಲ್ಲಿ ಕಥಾನಕದ ಭಾಗವಾಗಿಯೇ ಬೆರೆತಿರುವ ರೀತಿ ಅನನ್ಯವೆನಿಸುವಂತಹದು.

ಈ ಕವಿತೆಗಳು ರಚನೆಯಾದ ಕಾಲಕ್ಕೆ ಆ ಕಾವ್ಯ ಪ್ರಪಂಚ ಕಟ್ಟಿಕೊಟ್ಟ ರಮ್ಯಲೋಕ ಚಲನಚಿತ್ರ ಬಂದ ಕಾಲಕ್ಕೆ ಅಪ್ರಸ್ತುತವೆನಿಸುವಂತಹದಾಗಿತ್ತು. 'ಹನ್ನೆರಡು ತುಂಬಿಹುದು ಮದುವೆಯಿಲ್ಲ' ಎನ್ನುವ ಬಾಲ್ಯವಿವಾಹದ ಆಚರಣೆ ೧೯೨೨ ಕಾಲಕ್ಕೆ ಅಪ್ರಸ್ತುತ. ಬಾಗಿಲಿಗೆ ಬಂದು ಒಳಗೆ ಬರಲಪ್ಪಣೆಯೇ ಎನ್ನುವ ಬಳೆಗಾರ ಇವೆಲ್ಲವೂ ಚಿತ್ರ ಬಂದ ದಶಕಕ್ಕೆ ಅಪ್ರಸ್ತುತವಾಗಿದ್ದವು.

ಹಾಗೆಯೇ ಮೈಸೂರು ಮಲ್ಲಿಗೆ ಚಿತ್ರದ ಗೀತೆಗಳೆಲ್ಲವೂ 'ಮೈಸೂರು ಮಲ್ಲಿಗೆ' ಕವನಸಂಕಲನದ ಗೀತೆಗಳಾಗಿರುವುದಿಲ್ಲ. ಮೈಸೂರುಮಲ್ಲಿಗೆಯ ಮೂರು ಕವಿತೆಗಳು, ಇರುವಂತಿಗೆ,ಉಂಗುರ, ನವಪಲ್ಲವದ ಒಂದೊಂದು ಗೀತೆಗಳನ್ನು ಈ ಚಿತ್ರದಲ್ಲಿ ಅಳವಡಿಸಿಕೊಂಡಿದ್ದಾರೆ. ಒಟ್ಟಾರೆ ಕೆ.ಎಸ್.ಎನ್ ಅವರ ಗೀತೆಗಳ ಒಟ್ಟು ಆಶಯವನ್ನು ಗಮನಿಸಿ ಹಾಗೂ ಮೈಸೂರು ಮಲ್ಲಿಗೆ ಕವನಸಂಕಲನ ಬಿಡುಗಡೆಯಾದ ಕಾಲವನ್ನು ಗಮನಿಸಿ ಒಂದು ಕತೆಯನ್ನು ಸೃಷ್ಟಿಸಿ ಚಿತ್ರವಾಗಿಸಿರುವುದನ್ನು ನಾವು ಕಾಣಬಹುದಾಗಿದೆ. ಚಿತ್ರದಲ್ಲಿ ಬರುವ ಶಂಕರ ಪಾಟೀಲ ಎನ್ನುವ ವ್ಯಕ್ತಿ ಪೊಲೀಸ್ ಲಾಠಿ ಏಟಿನಿಂದ ಸಾಯುವುದು ಸ್ವಾತಂತ್ರ್ಯ ಚಳವಳಿಯಲ್ಲಿ ಲಾಲಲಜಪತ್ ರಾಯ್ ಅವರ ಸಾವನ್ನು ನೆನಪಿಸುತ್ತದೆ. ಸ್ವದೇಶಿ ವಸ್ತುಗಳ ಬಳಕೆ, ಜೈಲ್ ಭರೋ ಚಳವಳಿ, ಕರನಿರಾಕರಣೆ, ಮಹಾತ್ಮಗಾಂಧಿ ಅವರ ಮಾಡು ಇಲ್ಲವೆ ಮಡಿ ಚಳವಳಿಯ ಛಾಯೆ ಎಲ್ಲವನ್ನು ಈ ಚಿತ್ರದಲ್ಲಿ ಕಾಣಬಹುದಾಗಿದೆ.

ಚಿತ್ರದ ನಾಯಕಿಯು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ನಾಯಕನ ಆಶಯಗಳಿಗೆ ಪೂರಕವಾಗಿ ನಡೆಯುವುದು ಅಂದಿನ ಕಾಲದ ಮಹಿಳಾ ಪ್ರಾಧಾನ್ಯತೆಯನ್ನು ತೋರಿಸುತ್ತದೆ. ಸ್ವಾತಂತ್ರ ದಿನದಂದು ಮೈಸೂರು

ಮಲ್ಲಿಗೆ ಕವನ ಸಂಕಲನವನ್ನು ನಾಯಕಿ ಪದ್ಮ ಬಿಡುಗಡೆ ಮಾಡುವ ಮೂಲಕ ನಾವು ಭಾರತೀಯರು ಗೀತೆಯು ಮೊಳಗುತ್ತದೆ. ಕವಿತೆಗಳ ಪಿಸುಮಾತುಗಳು ಮುಕ್ಕಾಗದೇ ಉಳಿದಿವೆ. ಇದು ಚಿತ್ರದ ಸಾರ್ಥಕತೆ. ಇದರ ಜೊತಗೆ ಸಿ ಅಶ್ವತ್ ಅವರ ಸಂಗೀತ, ಗೌರಿ ಶಂಕರ ಅವರ ಛಾಯಾಗ್ರಹಣ ಸುಧಾರಾಣಿ, ಗಿರೀಶ್ ಕಾರ್ನಾಡ್ ಅವರ ಅಭಿನಯ ಚಿತ್ರದ ಸಾರ್ಥಕತೆಯನ್ನು ವಿಸ್ತರಿಸಿವೆ. ೨೫ ವಾರಗಳ ಯಶಸ್ವಿ ಪ್ರದರ್ಶನ ಕಂಡ ಈ ಚಲನಚಿತ್ರ ಐದು ರಾಜ್ಯ ಪ್ರಶಸ್ತಿಗಳನ್ನು, ಮೂರು ಫಿಲಂಫೇರ್ ಬಹುಮಾನವನ್ನು ಪಡೆಯಿತು. ಎಲ್ಲಕ್ಕಿಂತ ಮುಖ್ಯವಾಗಿ 'ನಾವು ಭಾರತೀಯರು' ಗೀತೆಗೆ ರಾಷ್ಟ್ರ ಪ್ರಶಸ್ತಿಯು ಲಭಿಸಿತು. ಕವನಗಳ ಮೂಲಕ ಜನಮಾನಸದಲ್ಲಿ ಉಳಿದ ಮೈಸೂರು ಮಲ್ಲಿಗೆ; ಚಲನಚಿತ್ರವಾಗಿಯೂ ತನ್ನ ಛಾಪನ್ನು ಕನ್ನಡಿಗರ ಮೇಲೆ ಒತ್ತಿದೆ.